# ಕೇಂದ್ರ ಸರಕಾರಿ ನೌಕರರಿಗೆ ದಸರಾ ಹಬ್ಬದ ಬೋನಸ್

**ದೆಹಲಿ:** ಕೇಂದ್ರ ಸರಕಾರಿ ನೌಕರರಿಗೆ ಸರಕಾರವು ದಸರಾ ಉಡುಗೊರೆ ನೀಡಿದೆ. 30 ಲಕ್ಷ ನಾನ್ ಗೆಜೆಟೆಡ್ ಉದ್ಯೋಗಿಗಳಿಗೆ ಬೋನಸ್ ಪ್ರಕಟಿಸಿದೆ.

ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದರು. ರೈಲ್ವೆ ಪೋಸ್ಟ್ ಆಫೀಸ್, ಇಪಿಎಫ್ಒ, ಇಎಸ್ಐಸಿ ಮೊದಲಾದ ಸಂಸ್ಥೆಗಳ 17 ಲಕ್ಷ ಉದ್ಯೋಗಿಗಳು ಉತ್ಪಾದನೆ ಆಧಾರಿತ ಬೋನಸ್ ಪಡೆಯಲಿದ್ದಾರೆ. ಅದೇ ರೀತಿ 13 ಲಕ್ಷ ಕೇಂದ್ರ ಸರಕಾರಿ ನೌಕರರು ಕೂಡ ಉತ್ಪಾದನೆ ಆಧಾರಿತವಲ್ಲದ ಬೋನಸ್‌ಗೆ ಅರ್ಹರಾಗಿದ್ದಾರೆ. ಇವರೆಲ್ಲರಿಗೂ ದಸಾರಾ ಹಬ್ಬಕ್ಕೆ ಮುನ್ನವೇ ಒಂದೇ ಕಂತಿನಲ್ಲಿ ಬೋನಸ್ ವಿತರಿಸಲಾಗುವುದು. ಬೋನಸ್ ನೀಡಲು ಕೇಂದ್ರ ಸರಕಾರದ ಬೊಕ್ಕಸಕ್ಕೆ 3,737 ಕೋಟಿ ರು. ಹೊರೆಯಾಗಲಿದೆ.

ಕರೋನಾ ಹಿನ್ನಲೆಯಲ್ಲಿ ನಿರಾಶಾಭಾವದಲ್ಲಿದ್ದ ಉದ್ಯೋಗಿಗಳಿಗೆ ಈ ನಿರ್ಧಾರದಿಂದ ಸಂತಸವಾಗಿದೆ. ದಸರಾ ಹಬ್ಬ ಸನಿಹದಲ್ಲೇ ಇದ್ದರೂ ಬುಧವಾರದವರೆಗೂ ಬೋನಸ್ ಕುರಿತಂತೆ ಯಾವುದೇ ಪ್ರಕಟಣೆ ಹೊರಬಿದ್ದಿರಲಿಲ್ಲ. ಹೀಗಾಗಿ 2019-20ನೇ ಸಾಲಿನಲ್ಲಿ ತಮಗೆ ಬೋನಸ್ ಮರೀಚಿಕೆ ಎಂದೇ ನೌಕರರು ತಿಳಿದಿದ್ದರು. ಇದೇ ಕಾರಣಕ್ಕೆ 22ನೇ ತಾರೀಕು ದೇಶಾದ್ಯಂತ 2 ಗಂಟೆ ಕಾಲ ಮುಷ್ಕರಕ್ಕೆ ರೈಲ್ವೆ ನೌಕರರ ಸಂಘ ಕರೆ ನೀಡಿತ್ತು.